For more job news visit : www.kpscvaani.com

Home Guards

ತುಮಕೂರು ಜಿಲ್ಲಾ ಗೃಹರಕ್ಷಕದಳ

"ಪತ್ರಿಕಾ ಪ್ರಕಟಣೆಯ ಕೃಪೆಗಾಗಿ"

ಸ್ವಯಂ ಸೇವಾ ಗೃಹರಕ್ಷಕರ ಖಾಲಿ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ನೇಮಕ ಮಾಡುವ ಕುರಿತು.

**

ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಗೃಹರಕ್ಷಕದಳದ ಆಯ್ಕೆ ಸಮಿತಿ ಅಧ್ಯಕ್ಷಕರು, ತುಮಕೂರು ಇವರ ಅನುಮೋದನೆ ದಿನಾಂಕ: 16-06-2026ರ ಮೇರೆಗೆ ತುಮಕೂರು ಜಿಲ್ಲೆಯ ವಿವಿಧ ಘಟಕಗಳಲ್ಲಿ ಖಾಲಿ ಇರುವ 234 ಸ್ವಯಂ ಸೇವಾ ಗೃಹರಕ್ಷಕ/ಗೃಹರಕ್ಷಕಿಯರ ಹುದ್ದೆಗಳನ್ನು ಆಯ್ಕೆ ಮಾಡುವ ಸಲುವಾಗಿ ಈ ಕೆಳಕಂಡ ಘಟವಾರು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಘಟಕದ ಹೆಸರು	ಪುರುಷ ಗೃಹರಕ್ಷಕರ ಸಂಖ್ಯೆ	ಮಹಿಳಾ ಗೃಹರಕ್ಷಕಿಯರ ಸಂಖ್ಯೆ	ಒಟ್ಟು ಗೃಹರಕ್ಷಕರ ಸಂಖ್ಯೆ
1	ತುಮಕೂರು	20	07	27
2	ಕ್ಯಾತಸಂದ್ರ	08	02	10
3	ಊರ್ಡಿಗೆರೆ	11	03	14
4	ಕುಣಿಗಲ್	12	05	17
5	ತುರುವೇಕೆರೆ	05	08	13
6	ಅಮೃತೂರು	06	04	10
7	ಮಧುಗಿರಿ	05	02	07
8	ಕೊರಟಗೆರೆ	09	–	09
9	ಮಿಡಿಗೇಶಿ	12	–	12
10	ಪಾವಗಡ	14	04	18
11	ವೈ. ಎನ್ ಹೊಸಕೋಟೆ	04	–	04
12	ಶಿರಾ	09	03	12
13	ಗುಬ್ಬಿ	08	04	12
14	ಕಳ್ಳಂಬೆಳ್ಳ	07	–	07
15	ತಾವರೆಕೆರೆ	15	–	15
16	ತಿಪಟೂರು	05	07	12
17	ಚಿಕ್ಕನಾಯಕನಹಳ್ಳಿ	10	–	10
18	ನೊಣ್ಣವಿನಕೆರೆ	09	05	14
19	ಹೊನ್ನವಳ್ಳಿ	11	–	11
	ಒಟ್ಟು	180	54	234

ಗೃಹರಕ್ಷಕದಳಕ್ಕೆ ಸೇರ ಬಯಸುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ದಿನಾಂಕ: 18-06-2026 ರಿಂದ 25-06-2026ರ ವರೆಗೆ ಅರ್ಜಿ ಸಮಯ ಬೆಳಿಗ್ಗೆ 10:30 ರಿಂದ 01:30 ಮತ್ತು ಮಧ್ಯಾಹ್ನ 03:00 ರಿಂದ 05:00 ಗಂಟೆವರೆಗೆ ವಿತರಿಸಲಾಗುವುದು.. (ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ) ಅರ್ಜಿಗಳನ್ನು ವಿತರಿಸುವ ಸ್ಥಳ ಜಿಲ್ಲಾ ಗೃಹರಕ್ಷಕದಳದ ಕಛೇರಿ, ಬಟವಾಡಿ ತುಮಕೂರು. (ಅಗ್ನಿಶಾಮಕ ಠಾಣೆ ಹತ್ತಿರ) ಅರ್ಜಿಗಳನ್ನು ಉಚಿತವಾಗಿ ಪಡೆಯುವುದು.

ಪುತಿನೋ. . .

For more job news visit : www.kpscvaani.com

ಪಡೆದ ಅರ್ಜಿಗಳನ್ನು ಈ ಕೆಳಗೆ ತಿಳಿಸಲಾಗಿರುವ ತಮ್ಮ ಎಲ್ಲಾ ವಿವರಗಳನ್ನು ಹಾಗೂ ದಾಖಲಾತಿಗಳೊಂದಿಗೆ ಭರ್ತಿಮಾಡಿ ದಿನಾಂಕ: 30-06-2026 ಸಂಜೆ 5-30ರ ಒಳಗೆ ಜಿಲ್ಲಾ ಗೃಹರಕ್ಷಕದಳ ಕಛೇರಿಗೆ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ. ದಿನಾಂಕ: 30-06-2026ರ ನಂತರ ಬರುವ ಯಾವುದೇ ಅರ್ಜಿಗಳನ್ನು ಸ್ವೀಕಾರ ಮಾಡಲಾಗುವುದಿಲ್ಲ.

ಗೃಹರಕ್ಷಕದಳದ ಸಂಸ್ಥೆಯು ಸ್ವಯಂ ಸೇವಕ ಸಂಸ್ಥೆಯಾಗಿದ್ದು, ಇದು ಖಾಯಂ ನೌಕರಿಯಾಗಿರುವುದಿಲ್ಲ. ಯಾವುದೇ ರೀತಿಯ ಮಾಸಿಕ ಸಂಬಳ / ವಿಶೇಷ ಭತ್ಯೆಗಳನ್ನು ಈ ಸಂಸ್ಥೆಯು ನೀಡುವುದಿಲ್ಲ. ನಿಯಮಾನುಸಾರ ತುರ್ತು ಸಂದರ್ಭದಲ್ಲಿ ಕರ್ತವ್ಯ , ಕಾನೂನು ಸುವ್ಯವಸ್ಥೆ, ಟ್ರಾಫಿಕ್ ಕರ್ತವ್ಯ, ಹಾಗೂ ಚುನಾವಣೆ ಕರ್ತವ್ಯಗಳಿಗೆ ನಿಯೋಜಿಸಿದ ದಿನಗಳಂದು ಮಾತ್ರ ಗೌರವ ಧನವನ್ನು ಬ್ಯಾಂಕ್ ಉಳಿತಾಯ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು. ಪ್ರತೀ ಮಾಹೆಯಲ್ಲಿ 4 ಕವಾಯತುಗಳನ್ನು, ವಾರದಲ್ಲಿ ಒಂದರಂತೆ ನಡೆಸಲಾಗುವುದು ಎಂದು ಗೃಹರಕ್ಷಕದಳದ ಜಿಲ್ಲಾ ಸಮಾದೇಷ್ಟರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದೃಢೀಕೃತ ದಾಖಲೆಗಳು.

1. ವಿದ್ಯಾರ್ಹತೆ 10ನೇ ತರಗತಿ ಉತ್ತೀರ್ಣ ಅಥವಾ ಮೇಲ್ಪಟ್ಟು (ಅಂಕಪಟ್ಟಿ)
2. ಜನ್ಮ ದಿನಾಂಕ ದೃಢೀಕರಣ (ಎಸ್, ಎಸ್, ಎಲ್, ಟಿ.ಸಿ.)
3. ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್
4. ವೋಟರ್ ಐ.ಡಿ.
5. ರೇಷನ್ ಕಾರ್ಡ್
6. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ 2
7. ಪೋಸ್ಟ್ ಕಾರ್ಡ್ ನಲ್ಲಿ ಪೊಸ್ಟಲ್ ಪಿನ್ ಕೋಡ್‌ನೊಂದಿಗೆ ಸ್ಪಷ್ಟ ವಿಳಾಸವನ್ನು ನಮೂದಿಸಿ ಸಲ್ಲಿಸುವುದು.
8. ದೈಹಿಕ ಸದೃಢತಾ ಪ್ರಮಾಣ ಪತ್ರ
9. ವಯೋಮಿತಿ: 19 ವರ್ಷ ಮುಗಿದಿರಬೇಕು ನಂತರ 50 ವರ್ಷದ ಒಳಗಿರಬೇಕು.
10. ಎಸ್ ಬಿ ಐ ಬ್ಯಾಂಕ್ ಉಳಿತಾಯ ಖಾತೆಯ ನಕಲು ಪ್ರತಿ.

ಹೆಚ್ಚಿನ ಮಾಹಿತಿಗಾಗಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ಜಿಲ್ಲಾ ಗೃಹರಕ್ಷಕದಳ ಕಛೇರಿ, ತುಮಕೂರು ದೂರವಾಣಿ ಸಂಖ್ಯೆ: 0816-2009116

ಸಹಿ/-

ಶ್ರೀ ಸಿ. ಗೋಪಾಲ್ ಕೆಎಸ್‌ಪಿಎಸ್

ಹೆಚ್ಚುವರಿ ಪೊಲೀಸ್ ಅಧೀಕ್ಷಕರು,

ಜಿಲ್ಲಾ ಗೃಹರಕ್ಷಕದಳ ಪ್ರಭಾರ ಸಮಾದೇಷ್ಟರು ಹಾಗೂ

ಸದಸ್ಯ ಕಾರ್ಯದರ್ಶಿ, ಗೃಹರಕ್ಷಕದಳದ ಆಯ್ಕೆ ಸಮಿತಿ, ತುಮಕೂರು.